**KACM210031452022**

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಡೂರು.

**ಸಿ.ಸಿ.ಸಂಖ್ಯೆ 2277/2022**

ಫಿರ್ಯಾದುದಾರರು:- ಸರ್ಕಾರದ ಪರವಾಗಿ ಸಖರಾಯಪಟ್ಟಣ ಪೊಲೀಸರು

ವಿರುದ್ಧ

ಆರೋಪಿತರು:- ಬಿ.ಬಿ.ಬಸವರಾಜು ಮತ್ತು ಇನ್ನೊಬ್ಬರು

**ದೋಷಾರೋಪಣೆ**

ಶ್ರೀ ಎಂ.ಎನ್. ರಾಮ್ ಪ್ರಶಾಂತ್, ಬಿ.ಎ.ಎಲ್. ಎಲ್.ಎಲ್.ಬಿ, 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಡೂರು ಆದ ನಾನು ಈ ಕೆಳಗೆ ಕಾಣಿಸಿರುವ:

1. ಬಿ.ಬಿ.ಬಸವರಾಜು ಬಿನ್ ಲೇಟ್ ಬಸವೇಗೌಡ,
   ಕೂಲಿ ಕೆಲಸ ಸುಮಾರು 67 ವರ್ಷಗಳು, ವ್ಯವಸಾಯ,
2. ಶೋಭಾ ಕೋಂ ಬಸವರಾಜಪ್ಪ, 50 ವರ್ಷ,

ಆರೋಪಿತರ ವಾಸ : ಬ್ಯಾಡರಹಳ್ಳಿ ಗ್ರಾಮ, ಕಡೂರು ತಾಲ್ಲೂಕು.

ಆದ ನಿಮ್ಮ ವಿರುದ್ಧ ಈ ಕೆಳಗಿನಂತೆ ಹೊರಿಸಿರುವ ದೋಷಾರೋಪಣೆ ಏನೆಂದರೆ:

ದಿನಾಂಕ 02.04.2022 ರಂದು ಸಂಜೆ 4.00 ಗಂಟೆ ಸಮಯದಲ್ಲಿ ಸಖರಾಯಪಟ್ಟಣ ಠಾಣಾ ಸರಹದ್ದಿನ ಬ್ಯಾಡರಹಳ್ಳಿ ಗ್ರಾಮದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ-1 ದಿನೇಶ ಮತ್ತು ಚಾಸಾ-2 ವೇದಮೂರ್ತಿ ರವರ ಮನೆಯ ಮುಂದೆ ಬಂದು ಮಳೆ ನೀರು ನಿಮ್ಮ ಗೋಡೆಗೆ ಹರಿದ ವಿಚಾರದಲ್ಲಿ ಚಾಸಾ-1 ಮತ್ತು 2 ರವರಿಗೆ ಅವಾಚ್ಯ ಶಬ್ದಗಳಿಂದ ನಿಂದನೆ ಮಾಡಿ ಸಾರ್ವಜನಿಕ ಶಾಂತಿಭಂಗವನ್ನುಂಟು ಮಾಡಿರುತ್ತೀರಿ. ಆದ್ದರಿಂದ ನೀವು ಭಾರತೀಯ ದಂಡ ಸಂಹಿತೆಯ ಕಲಂ 504 ಸಹಕಲಂ 34 ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ-1 ರವರೊಂದಿಗೆ ಜಗಳ ತೆಗೆದು, 2 ನೇ ಆರೋಪಿಯಾದ ನೀವು ಕೈಯ್ಯಿಂದ ಚಾಸಾ-1 ರವರನ್ನು ಕೆಳಕ್ಕೆ ತಳ್ಳಿ ಕೆಳಕ್ಕೆ ಬೀಳಿಸಿ ನೋವುಂಟು

**KACM210031452022**

ಮಾಡಿರುತ್ತೀರಿ. ಆದ್ದರಿಂದ ನೀವು ಭಾರತೀಯ ದಂಡ ಸಂಹಿತೆಯ ಕಲಂ 323 ಸಹಕಲಂ 34 ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೂರನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ-1 ರವರೊಂದಿಗೆ ಜಗಳ ತೆಗೆದು, 1 ನೇ ಆರೋಪಿಯಾದ ನೀವು ರೀಪರ್ ನಿಂದ ಚಾಸಾ-1 ರವರ ತಲೆಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಆದ್ದರಿಂದ ನೀವು ಭಾರತೀಯ ದಂಡ ಸಂಹಿತೆಯ ಕಲಂ 324 ಸಹಕಲಂ 34 ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಕೊನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ-1 ಮತ್ತು 2 ರವರಿಗೆ ಮಾಡನ್ನು ಸರಿಪಡಿಸದಿದ್ದರೆ ಕೊಲೆ ಮಾಡುವುದಾಗಿ ಪ್ರಾಣ ಬೆದರಿಕೆ ಹಾಕಿರುತ್ತೀರಿ. ಆದ್ದರಿಂದ ನೀವು ಭಾರತೀಯ ದಂಡ ಸಂಹಿತೆಯ ಕಲಂ 506 ಸಹಕಲಂ 34 ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

1. ನಿಮಗೆ ಈಗ ಓದಿ ಹೇಳಿದ ಆರೋಪವು ತಿಳಿಯಿತೆ?

ಉಃ 1 ಮತ್ತು 2 ನೇ ಆರೋಪಿ ಃ

2. ನಿಮ್ಮ ಮೇಲೆ ಇರುವ ಆರೋಪವನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೆ?

ಉಃ 1 ಮತ್ತು 2 ನೇ **ಆರೋಪಿ** ಃ

ಈ ಆರೋಪಗಳ ಮೇಲೆ ನೀವು ಈ ನ್ಯಾಯಾಲಯದ ಆರೋಪ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ **31** ನೇ ದಿವಸ ಮೇ ಮಾಹೆ 2023 ನೇ ಇಸವಿ.

**Sd/-**

**(ರಾಮ್ ಪ್ರಶಾಂತ್ ಎಂ.ಎನ್.),**

2 ನೇ ಹೆಚ್ಚುವರಿ ಪ್ರದನ್ಯಾದಂ ಕಡೂರು.

Visit **ecourts.gov.in** for updates or download mobile app "**eCourts Services**" from Android or iOS